‘ಮುಂಜಾವು’ ಚಂದಾದರ
ಆಜೀವ ಚಂದಾ ೨೦೦ ರೂ
ವಾರ್ಷಿಕ ಚಂದಾ ೨೦ ರೂ.
ಬಿಡಿ ಪ್ರತಿ ೪೦ ಪೈಸೆ

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

‘ಮುಂಜಾವು’ ಜಾಹೀರಾತು ದರ
(ಕಾಲಂ ಸೆಂ. ಮೀ.ಗೆ)
ಮುಖಪುಟದಲ್ಲಿ: ೫ ರೂ.
ಇತರ ಪುಟಗಳಲ್ಲಿ: ೪ ರೂ.

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯ | ಬೆಲೆ ೨೦ ಪೈಸೆ

ಸಂಪುಟ ೧ ಸಂಚಿಕೆ ೩೮ | ಭಾನುವಾರ ೧೫-೫-೧೯೮೩ | ಕೊಪ್ಪ

ನ. ರಾ. ಪುರ ತಹಸೀಲ್ದಾರ್ ಬದಲಾವಣೆ

ನ.ರಾ.ಪುರ: ಇಲ್ಲಿಗೆ ತಹಸೀಲ್ದಾರರನ್ನಾಗಿ ಹೆಚ್.ಎಂ. ಸೋಮಶೇಖರಯ್ಯ ಅವರನ್ನು ಜಿ.ಸಿ. ರಾಜಶೇಖರ್ ಸ್ಥಾನದಲ್ಲಿ ನೇಮಕ ಮಾಡಲಾಗಿದೆಯೆಂದು ವರದಿಯಾಗಿದೆ.

ರೇಷ್ಮೆ: ಶೃಂಗೇರಿ ರೈತ ಬೆಳೆದ ಬೆಳೆ

ಬಿತ್ತನೆಗೆ ಆಯ್ಕೆ

ಶೃಂಗೇರಿ: ಇಲ್ಲಿಗೆ ಸಮೀಪದ ವಿದ್ಯಾರಣ್ಯಪುರದ ಯಶಸ್ವಿ ರೇಷ್ಮೆ ಬೆಳೆಗಾರ, ನಿವೃತ್ತ ಅಧ್ಯಾಪಕ ವಿ. ರಾಮಭಟ್ಟರು ಬೆಳೆದ ಬೈವೋಲ್ಟೈನ್ ತಳಿಯ ರೇಷ್ಮೆ ಹಾಸನ ವಲಯಕ್ಕೆ ಬಿತ್ತನೆ ಗೂಡಾಗಿ ಎರಡನೇ ಬಾರಿಗೆ ಆಯ್ಕೆಯಾಗಿದೆ. ಈ ಗೂಡಿಗೆ ಕಿ.ಲೋ.ಗೆ ೯೭ ರೂ.ಗಳ ಉತ್ಕೃಷ್ಟ ಬೆಲೆ ಬಂದಿದ್ದು, ಇದೊಂದು ಹೆಮ್ಮೆಯ ಸಾಧನೆಯಾಗಿದೆ.

ತೀವ್ರ ಗಮನ ವಹಿಸಿ, ಶಿಸ್ತಿನಿಂದ, ಕ್ರಮಬದ್ಧವಾಗಿ ರೇಷ್ಮೆ ಕೃಷಿ ಮಾಡುವ ರಾಮಭಟ್ಟರು ತಾಲ್ಲೂಕಿನ ಇತರ ಹಲವಾರು ರೈತರಿಗೆ ಮಾರ್ಗದರ್ಶನ ಮಾಡುವ ಮಟ್ಟಿಗೆ ಸಮೃದ್ಧ ಅನುಭವ ಪಡೆದಿದ್ದಾರಲ್ಲದೆ, ರೇಷ್ಮೆ ಕೃಷಿ ಮಾಡ ಬೇಕೆನ್ನುವವರಿಗೆ ಒಂದು ಮಾದರಿ ಯಾಗಿದ್ದಾರೆ. ತಾಲ್ಲೂಕಿನಲ್ಲಿ ರೇಷ್ಮೆ ಕೃಷಿ ತೀವ್ರವಾಗಿ ಹಬ್ಬುತ್ತಿರುವ ಹಿನ್ನೆಲೆಯಲ್ಲಿ ಇವರ ಅನುಭವಗಳು ಇಲಾಖೆಗೂ ಇತರ ಕೃಷಿಕರಿಗೂ ಉಪಯುಕ್ತವಾಗಬಹುದು.

ಜನರ ಅಗತ್ಯಗಳನ್ನರಿಯಲು ಶಾಸಕರ ವಿನೂತನ ಕ್ರಮ:

ಹಳ್ಳಿಗಳಲ್ಲಿ ಪಾದಯಾತ್ರೆ

ಶೃಂಗೇರಿ: ತಮ್ಮ ಕ್ಷೇತ್ರದ ಹಳ್ಳಿಗರ ಸಂಕಷ್ಟಗಳು ಮತ್ತು ಅವಶ್ಯಕತೆಗಳನ್ನು ತಿಳಿಯಲು ಒಂದು ವಿನೂತನ ಪ್ರಯೋಗವಾಗಿ ಶಾಸಕ ಗೋವಿಂದಗೌಡರು ಹಳ್ಳಿಗಳ ಮೂಲಕ ಪಾದಯಾತ್ರೆ ಆರಂಭಿಸಿದ್ದಾರೆ.

ಅದ್ದೂರಿ-ಆಡಂಬರದ ಸಮಾರಂಭಗಳಿಲ್ಲದೆ, ಕಾರು-ಜೀಪು-ಮೋಟಾರ್‌ಬೈಕ್‌ಗಳ ಬಾಲಂಗೋಚಿಯಿಲ್ಲದೆ ಪಕ್ಷದ ಕಾರ್ಯಕರ್ತರು ಮತ್ತು ಜನರೊಂದಿಗೆ ಮುಖ್ಯ ಮುಖ್ಯ ಗ್ರಾಮಗಳ ಮೂಲಕ ಸಾಗುವ ಪಾದ ಯಾತ್ರೆಯಲ್ಲಿ ಜನ ನೇರವಾಗಿ ತಮ್ಮ ಕುಂದು-ಕೊರತೆಗಳನ್ನು ಶಾಸಕರ ಬಳಿ ಹೇಳಿಕೊಳ್ಳುತ್ತಾರೆ ಅಥವಾ ಮನವಿ ಸಲ್ಲಿಸುತ್ತಾರೆ.

ಮೊದಲೆರಡು ದಿನ

ಈ ಕಾರ್ಯಕ್ರಮದ ಮೊದಲಿಗೆ ಶೃಂಗೇರಿ ತಾಲ್ಲೂಕಿಗೆ ಇಳಿದಿರುವ ಶಾಸಕರು ಮೇ ೧೧ ರಂದು ಅಡ್ಡಗದ್ದೆಯಿಂದ ಪ್ರಾರಂಭಿಸಿ ಕಾವಡಿ, ಆನೆಗುಂದ, ಮೆಣಸೆ ಮಾರ್ಗವಾಗಿ ಕುಂಚೆಬೈಲಿನವರೆಗೂ, ೧೨ರಂದು ಅಲ್ಲಿಂದ ಒಳಮಾರ್ಗದಲ್ಲಿ ತೆಕ್ಕೂರು, ವೈಕುಂಠಪುರ ಮಾರ್ಗವಾಗಿ ಶೃಂಗೇರಿಗೂ ನಡೆದಿದ್ದಾರೆ.

ಸಮಸ್ಯೆಗಳು

ಕುಂದುಕೊರತೆಗಳನ್ನು ನಿವೇದಿಸುವ ನೂರಾರು ಮನವಿಗಳು ಬಂದಿದ್ದು, ಕುಡಿಯುವ ನೀರು, ಜಮೀನಿಗೆ ಜಲಾಶ್ರಯ, ಹಾಗೂ ಸೇತುವೆಗಳು ಎಲ್ಲೆಡೆ ಎದ್ದುಕಾಣುವ ಸಮಸ್ಯೆಗಳಾಗಿವೆ.

೧೨ರಂದು ಶೃಂಗೇರಿ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಜೊತೆ ಈ ಎಲ್ಲ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ ನಡೆಸಿ ಶಾಸಕರು ಸೂಕ್ತ ಸಲಹೆ-ಆದೇಶಗಳನ್ನು ನೀಡಿದರು.

ಜನ ನೇರವಾಗಿ ಮನಸ್ಸು ಬಿಚ್ಚಿ ತಮ್ಮ ಅಭಿಪ್ರಾಯ ಕೊಡುತ್ತಾರೆ; ಕೆಲವಾದರೂ ಸಮಸ್ಯೆಗಳ ಯಥಾರ್ಥತೆಯನ್ನು ಖುದ್ದು ಪರಿಶೀಲಿಸಲು ಸಾಧ್ಯವಾಗುತ್ತದೆ; ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಅಂದಾಜು ಮಾಡಲು ಅನುಕೂಲವಾಗುತ್ತದೆ-ಇವು ಪಾದಯಾತ್ರೆಯಿಂದ ದೊರೆಯುವ ಪ್ರಯೋಜನಗಳೆಂದು ಗೋವಿಂದಗೌಡರು ‘ಮುಂಜಾವು’ ಜೊತೆ ತಮ್ಮ ಅನುಭವಗಳನ್ನು ವಿವರಿಸುತ್ತಾ ಹೇಳಿದರು.

ಇದೇ ೧೬, ೧೭ರಂದು ಕಿಗ್ಗ ಹೋಬಳಿಯಲ್ಲಿ ಪಾದಯಾತ್ರೆ ಮಾಡಲಿದ್ದಾರೆ. (ಕೆಲವು ಪ್ರಮುಖ ಸಮಸ್ಯೆಗಳು ಹಾಗೂ ಅವುಗಳಿಗೆ ಶಾಸಕರು ತೆಗೆದುಕೊಂಡ ಕ್ರಮಗಳು ಮುಂದಿನ ವಾರ. —ಸಂ.)

ಟಾರ್ ಹಾಕಿಸಲು ಹಣ ಮಂಜೂರು

ಶೃಂಗೇರಿ: ಕೆರೆಕಟ್ಟೆ ರಸ್ತೆಯಲ್ಲಿ ಬಾಕಿ ಆಗಿರುವ ೧೦ ಕಿ.ಮೀ. ದೂರಕ್ಕೆ ಟಾರು ಹಾಕಿಸಲು ೫ಲಕ್ಷ ರೂ. ಮಂಜೂರಾಗಿದೆಯೆಂದು ತಾ||ಜನತಾಪಕ್ಷದ ಕೆ.ಎಂ. ಶ್ರೀನಿವಾಸ್ ತಿಳಿಸಿದ್ದಾರೆ.

ಈ ಕೈಕೆ ಬಜೆಟ್ಟಿನಲ್ಲಿ ೩ಲಕ್ಷ ರೂ.ಗಳನ್ನು ಒದಗಿಸಿದ್ದು, ಬೇರೆ ಮೂಲಗಳಿಂದ ೨ ಲಕ್ಷ ರೂ.ಗಳನ್ನು ಒದಗಿಸುವುದಾಗಿ ಲೋಕೋಪಯೋಗಿ ಇಲಾಖೆ ಮಂತ್ರಿ ಹೆಚ್.ಡಿ. ದೇವೇಗೌಡರು ಶೃಂಗೇರಿ ನಿಯೋಗವೊಂದಕ್ಕೆ ಭರವಸೆ ಇತ್ತಿದ್ದಾರೆ. [illegible] ಶ್ರೀನಿವಾಸ್ ಹೇಳಿದ್ದಾರೆ.

[illegible] ಕೊಪ್ಪದಲ್ಲಿ ಎರಡುದಿನ ಎಲ್ಲರ [illegible] ಸಂತಾಪದ ಮಾತು. [illegible] ವರ್ಷದ ಗಂಡು ಮಗುವಿನ [illegible] [illegible] ‘ಮುಂಜಾವು’ ಬಳಗ [illegible] [illegible] ವ್ಯಕ್ತಪಡಿಸುತ್ತದೆ.

ಹಾವು ಹಿಡಿವ ಕಲೆಯೇ ಮೃತ್ಯುವಾಯಿತು ಇವನಿಗೆ

ಕೊಪ್ಪ: ಹಾವು ಹಿಡಿಯುವುದರಲ್ಲಿ ನಿಪುಣ ಈತ. ಕಡೆಗೆ ಹಾವೇ ಮೃತ್ಯುವಾಯಿತು ಇವನಿಗೆ. ಕೊಪ್ಪದಲ್ಲಿ ಹಾವು ಹಿಡಿಯುವ ಬಗ್ಗೆ ಮನೆಮಾತಾಗಿದ್ದ ಸುಮಾರು ೩೫ ವರ್ಷದ ತರುಣ ತಾರಾನಾಥ ಮೇ ೧೨ ರಂದು ದುರಂತ ಸಾವನ್ನಪ್ಪಿದ್ದು ಹೀಗೆ.

ಬೇಡವೆಂದರೂ ಹಾವು ಹಿಡಿದ!

ಮೇ ೧೨ರ ಮಧ್ಯಾಹ್ನ ೧೨ಗಂಟೆ ವೇಳೆಗೆ ಬಾಳಗಡಿ-ಮೇಲ್ಪಾಲ್ ತಿರುವಿನ ಹೋಟೆಲಿನಲ್ಲಿ ನಾಗರಹಾವು ಕಾಣಿಸಿತು ಈತನಿಗೆ. "ಅದು ಯಾವಾಗಲೂ ಇಲ್ಲೇ ಸುತ್ತಾಡಿಕೊಂಡಿರುತ್ತದೆ. ಹಿಡಿಯುವುದು ಬೇಡ" ಎಂದು ಮನೆಯವರು ಹೇಳಿದರೂ ಕೇಳದೆ ಹಾವು ಹಿಡಿದಾಗ ಅದು ಆತನಿಗೆ ಕಚ್ಚಿಯೇ ಬಿಟ್ಟಿತೆಂದು ಪ್ರತ್ಯಕ್ಷದರ್ಶಿಗಳ ಹೇಳಿಕೆ.

ಸ್ವಂತ ಔಷಧಿ ನಾಟಲಿಲ್ಲ

ಹಿಂದೆಯೂ ಹಾವುಗಳಿಂದ ಕಚ್ಚಿಸಿಕೊಂಡಿದ್ದ ಈತ ಕೂಡಲೇ ತನಗೆ ಗೊತ್ತಿದ್ದ ಔಷಧಿಗಳನ್ನು ಮಾಡಿಕೊಂಡನೆಂದೂ, ಆದರೆ ಸ್ವಲ್ಪ ಹೊತ್ತಿನಲ್ಲೇ ದೇಹಸ್ಥಿತಿ ವಿಷಮಿಸಿದಾಗ ಮನೆಯವರು ಕೂಡಲೇ ತೀರ್ಥಹಳ್ಳಿ ಆಸ್ಪತ್ರೆಗೆ ಧಾವಿಸಿದರೂ ಪ್ರಯೋಜನವಾಗದೆ ಮಧ್ಯಾಹ್ನ ೩ ಗಂಟೆ ಹೊತ್ತಿಗೆ ಅಸು ನೀಗಿದನೆಂದೂ ತಿಳಿದುಬಂದಿದೆ.

ಅಪಾರ ಸಂಖ್ಯೆಯಲ್ಲಿ ಹಿತೈಷಿಗಳು, ಮಿತ್ರರು ಮೃತನ ಮನೆಗೆ ತೆರಳಿ ಸಂತಾಪ ಸೂಚಿಸಿದರು.

ಗಂಧ ಪತ್ತೆ ವರದಿ: ಸಮಜಾಯಿಷಿ ಕೇಳಿ ಸಿಬ್ಬಂದಿಗೆ ನೋಟೀಸ್?

ಜಯಪುರ: ಇಲ್ಲಿಗೆ ಸಮೀಪದ ಕೆರೆಮಕ್ಕಿ ಎಸ್ಟೇಟಿನಲ್ಲಿ ಗಂಧ ಪತ್ತೆಯಾದ ಬಗ್ಗೆ ಮೇ. ೮ರ ‘ಮುಂಜಾವು’ ವರದಿಮಾಡಿ [illegible] ಸಿಬ್ಬಂದಿಗೆ ಡಿ.ಎಫ್.ಓ. ಅವರಿಂದ ನೋಟೀಸು ಜಾರಿಯಾಗಿದೆಯೆಂದು ನಂಬಲರ್ಹವಾಗಿ ತಿಳಿದುಬಂದಿದೆ.

"ಪೋಲೀಸರು ಗಂಧ ವಶಪಡಿಸಿಕೊಂಡಿದ್ದಾರೆಂದರೆ, ಈ ಪ್ರಕರಣದಲ್ಲಿ ನೀವೇಕೆ [illegible] ಕಾರಣರಾಗಿರಬಾರದು?- ಎಂಬ ಸಂಶಯಕ್ಕೆ ತಕ್ಷಣ ಸಮಜಾಯಿಷಿ ನೀಡಿ" ಎಂದು [illegible] ದಾಗಿ ಡಿ.ಎಫ್.ಓ. ಕೇಳಿದ್ದಾರೆನ್ನಲಾಗಿದೆ.

ಇದರ ಪರಿಣಾಮ ಇನ್ನೂ ತಿಳಿದು ಬಂದಿಲ್ಲ.

೪೦ ಕಿಲೊ ತೂಕದ ಕುಂಬಳಕಾಯಿ!

ಹರಿಹರಪುರ: ದೊಡ್ಡದೆಂದರೆ ಎಷ್ಟು ದೊಡ್ಡ ಕುಂಬಳಕಾಯಿ ನೋಡಿದ್ದೀರಿ? ೮ ಕಿಲೊ? ೧೦ ಕಿಲೋ? [illegible] ಕಿಲೋದ್ದು ನೋಡಿದ್ದೀರಾ? ಬಹುದಾ?

ಇಲ್ಲಿಗೆ [illegible] [illegible] ಕಿಲೊ. [illegible] ಕಿಲೊ [illegible] ಬೆಳೆದಿದೆ. [illegible] [illegible] ಬೆಳೆಯುತ್ತ ಕೊಂಡು [illegible] [illegible]

ದಲಿತರಿಗೆ ಭೂಮಿ [illegible]

[illegible]

ಓದುಗರ ಪತ್ರಗಳು

ಬೊಮ್ಲಾಪುರ ಗ್ರಾಮದ ಕಾಮಗಾರಿ ಮಂಜೂರು ಮಾಡಿಸಲು ಒತ್ತಾಯ

'ಮುಂಜಾವು' ಸಂಪಾದಕರಿಗೆ,

ಸ್ವಾಮಿ,

ತಮ್ಮ ೨೪-೪-೮೩ ರ ಸಂಚಿಕೆಯಲ್ಲಿ ೧೯೮೩-೮೪ನೇ ಸಾಲಿನಲ್ಲಿ ಶೃಂಗೇರಿ ಕ್ಷೇತ್ರಕ್ಕೆ ಲೋಕೋಪಯೋಗಿ ಇಲಾಖೆಗೆ ಒಂದು ಕೋಟಿ ರೂಪಾಯಿ ನೀಡಿರುವುದಾಗಿ ವರದಿಯಾಗಿರುವುದು ಸರಿಯಷ್ಟೆ. ಸದರಿ ವರದಿಯನ್ನು ನಾವು ಕೂಲಂಕಷವಾಗಿ ಪರಿಶೀಲಿಸಲಾಗಿ ನಮ್ಮ ಗ್ರಾಮದ ಯಾವುದೇ ಮುಖ್ಯ ಕೆಲಸಗಳು ಅದರಲ್ಲಿ ಕಂಡುಬರಲಿಲ್ಲ. ಬಹಳ ಹಿಂದಿನಿಂದಲೂ **ಅಸೂಡಿ ದೊಡ್ಡಹಳ್ಳ** ಮತ್ತು **ಬೋಳಾಪುರ ಸಣ್ಣಹಳ್ಳಗಳಿಗೆ ಆಣೆಕಟ್ಟುಗಳನ್ನು** [೨೦೦ ಎಕರೆಗೆ ನೀರು ಹಾಯುವ ಪ್ರದೇಶ] ಮತ್ತು **ಕೋಣೆಗದ್ದೆ ಹಳ್ಳ** ಮತ್ತು **ಮುಂಡಿಗೆಮನೆ ಹಳ್ಳಗಳಿಗೆ ಸೇತುವೆಗಳನ್ನು** ನಿರ್ಮಾಣ ಮಾಡಿಸಿಕೊಡುವಂತೆ ಕೇಳುತ್ತ ಬಂದಿದ್ದೆವು. ರಾಮಯ್ಯನವರು ಮಂತ್ರಿಯಾಗಿದ್ದಾಗ ಈ ಬಗ್ಗೆ ಸ್ವಲ್ಪ ಪ್ರಗತಿಯಾಗಿ ಕೊಪ್ಪ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರ ಕಛೇರಿಯಿಂದ ಈ ಕೆಳಕಂಡಂತೆ ಲಿಖಿತದ ಉತ್ತರ ಬಂದಿರುತ್ತದೆ. [ಅಎಇಕ/ಡಿವಿ/ಮನವಿ/೭೭-೭೮/೮೧-೮೨] "೧) ಆಣೆಕಟ್ಟುಗಳ ವಿಚಾರವನ್ನು ಕಟ್ಟಲು ೧೯೮೧-೮೨ರ ಕಾರ್ಯಕ್ರಮ ಪಟ್ಟಿಗೆ ಸೇರಿಸಲಾಗಿದೆ. ಸದರಿ ಕೆಲಸವು ಮಂಜೂರಾದ ಕೂಡಲೇ ಕೈ ಗೊಳ್ಳಲಾಗುವುದು. ೨) ಹಳ್ಳಗಳಿಗೆ ಸೇತುವೆಗಳನ್ನು ಕಟ್ಟಲು ೧೯೮೧-೮೨ರ ಬಜೆಟ್ ಕಾರ್ಯಕ್ರಮ ಪಟ್ಟಿಗೆ ಸೇರಿಸಲು ಶಿಫಾರಸು ಮಾಡಿದ್ದು ಅದು ಮಂಜೂರಾದ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು."

ಅನಂತರ ಇದುವರೆಗೆ ಈ ಬಗ್ಗೆ ಏನೂ ಪ್ರಗತಿ ಆದಂತೆ ಕಂಡುಬರಲಿಲ್ಲ. ಇದು ರಾಜಕೀಯ ಕೈವಾಡವೋ ಅಥವಾ ಊರಿನವರ ದುರದೃಷ್ಟವೋ ಗೊತ್ತಿಲ್ಲ. ಈ ವಿಚಾರವನ್ನು ಈಗಾಗಲೇ ಹಾಲಿ ಶಾಸಕರಾದ ಹೆಚ್.ಜಿ. ಗೋವಿಂದಗೌಡರ ಗಮನಕ್ಕೂ ತಂದಿರುತ್ತೇವೆ. ಆದರೂ ಯಾವ ಪ್ರಗತಿಯೂ ಆದಂತೆ ಕಂಡುಬರಲಿಲ್ಲ. ಇನ್ನಾದರೂ ಸಂಬಂಧಪಟ್ಟವರು ಇತ್ತ ಕಡೆ ಗಮನಹರಿಸುತ್ತಾರೊ ಕಾದುನೋಡಬೇಕಾಗಿದೆ.

–ಮಂಜಯ್ಯಶೆಟ್ಟಿ, ಪಂ. ಅಧ್ಯಕ್ಷ,
ಮತ್ತು ಮೂವರ ಸಹಿ ಇದೆ.

[ಈ ಪತ್ರದ "....ರಾಜಕೀಯ ಕೈವಾಡವೋ...." ಎಂಬುದನ್ನು ಓದಿದ ಶಾಸಕ ಹೆಚ್. ಜಿ. ಗೋವಿಂದಗೌಡರು ತೀವ್ರ ಕೋಪ ವ್ಯಕ್ತಪಡಿಸುತ್ತಾ ಹೇಳಿದರು–"ಈ ಸೇತುವೆ ಹಾಗೂ ಆಣೆಕಟ್ಟುಗಳ ವಿಚಾರವನ್ನು ಈವರೆಗೆ ಯಾರೂ ನನ್ನ ಗಮನಕ್ಕೆ ತಂದಿಲ್ಲ. ನನಗೆ ಸಲ್ಲಿಸಿದ ಮನವಿಗಳಲ್ಲಿದ್ದ ಕಾಮಗಾರಿಗಳ ಬಗ್ಗೆಲ್ಲ ಈಗಾಗಲೇ ಸಂಬಂಧಪಟ್ಟ ಇಲಾಖೆಗಳೊಂದಿಗೆ ವ್ಯವಹರಿಸುತ್ತಿದ್ದೇನೆ. ಆದರೂ, ಈ ಕೆಲಸಗಳೂ ಅಗತ್ಯವಾಗಿ ಆಗಬೇಕಾದಂಥವು ಹೌದು. ಆದ್ದರಿಂದ ಅವುಗಳ ಬಗ್ಗೆ ಸಹ ಯಾವ ತಾರತಮ್ಯವಿಲ್ಲದೆ ಪ್ರಯತ್ನ ನಡೆಸುತ್ತೇನೆ." ಊರಿಗೆ ಆಗಬೇಕಾದ ಕೆಲಸಗಳಲ್ಲಿ ಅನಗತ್ಯವಾಗಿ ರಾಜಕೀಯ ಬೆರೆಸದೆ, ವಿಷಯವನ್ನು ನೇರವಾಗಿ ತಮ್ಮ ಗಮನಕ್ಕೆ ತಂದು ಕೆಲಸ ಮಾಡಿಸಿಕೊಳ್ಳಬೇಕೆಂದೂ ಅವರು ಸಾರ್ವಜನಿಕರಿಗೆ ಮನವಿ ಮಾಡಿದರು.

–ಸಂ]

ಕೊಪ್ಪಕ್ಕೆ ಕೋರ್ಟು: ನ.ರಾ.ಪುರ ವಕೀಲರ ಅಭಿಪ್ರಾಯಕ್ಕೆ ಶೃಂಗೇರಿ ತಾಲ್ಲೂಕಿನವರ ಸಮಜಾಯಿಷಿ

ಮಾನ್ಯರೆ,

"ಕೊಪ್ಪದಲ್ಲಿ ನ್ಯಾಯಾಲಯ ಸ್ಥಾಪನೆ ಬಗ್ಗೆ ನ.ರಾ.ಪುರ ವಕೀಲರ ಕೆಲವು ಅಭಿಪ್ರಾಯ"ಗಳನ್ನು ('ಮುಂಜಾವು' ೮-೫-೮೩) ಓದಿದೆವು. ಶೃಂಗೇರಿ ತಾ॥ನವರಿಗೆ ಉಪಯೋಗ ಆಗುತ್ತೋ ತೊಂದರೆಯಾಗುತ್ತೋ ಎಂಬ ವಿಷಯದಲ್ಲಿ ಅವರ ಅಭಿಪ್ರಾಯ ಅಷ್ಟು ಸರಿಯಲ್ಲ ಎಂದು ಹೇಳಬೇಕಾಗಿದೆ.

ನಮಗೆ ಕೊಪ್ಪಕ್ಕೆ ಹೋಗುವುದೂ ನ.ರಾ.ಪುರಕ್ಕೆ ಹೋಗುವುದೂ ಒಂದೇ ಆಗುವುದಿಲ್ಲ. ಬಸ್ಸಿನ ಸೌಕರ್ಯ ಬೇಕಾದ ಹಾಗೇ ಇಲ್ಲ. ಕೊಪ್ಪದಿಂದ ನ.ರಾ.ಪುರಕ್ಕೆ ಪ್ರಯಾಣ ಕೇವಲ ಮುಕ್ಕಾಲು ಗಂಟೆ ಇರಬಹುದು. ಆದರೆ ಆ ಮಾರ್ಗದಲ್ಲಿ ಒಂದು ಬಸ್ಸು ಹೊರಟು ಹೋಗಿತ್ತೆಂದರೆ ಮತ್ತೆ ಒಂದೂವರೆ–ಎರಡು ಗಂಟೆ ಕಾಲ ಪುನಃ ಬಸ್ಸಿರುವುದಿಲ್ಲ.

ಕೊಪ್ಪದಲ್ಲಿ ಕೋರ್ಟು ಆದರೆ ಲಾಯರನ್ನು ಕಾಣಲು ಒಂದು ಕಡೆ, ಕೋರ್ಟಿಗೆ ಇನ್ನೊಂದು ಕಡೆ ಅಲೆಯುವ ಪ್ರಮೇಯವೇನೂ ಬಹಳ ಕಾಲ ಇರುವುದಿಲ್ಲ. ಕಕ್ಷಿಗಾರರಿಗೇನೂ ನ. ರಾ.ಪುರದ ವಕೀಲರೇ ಆಗಬೇಕೆಂದಿಲ್ಲ. ತಮಗೆ ಎಲ್ಲಿ ಸೌಕರ್ಯವೋ ಅಲ್ಲೇ ವಕೀಲರನ್ನು ಹಿಡಿಯುತ್ತಾರೆ. ಕೊಪ್ಪದಲ್ಲಿ ಈಗ ಕಡಿಮೆ ಜನ ವಕೀಲರಿದ್ದರೂ ಕೋರ್ಟು ಬೆಳೆದಂತೆ ಇದರಲ್ಲೂ ಬೆಳವಣಿಗೆ ಆಗೇ ಆಗುತ್ತದೆ. ಈಗಾಗಲೇ ನಡೆಯುತ್ತಿರುವ ಪ್ರಕರಣಗಳಲ್ಲಿ ಸ್ವಲ್ಪ ಕಾಲ ಈ ಸಮಸ್ಯೆ ಬರಬಹುದು. ಆದರೆ ಅದು ತಾತ್ಕಾಲಿಕ ಮತ್ತು ಅನಿವಾರ್ಯ. ಅಷ್ಟಕ್ಕಾಗಿ ಇಲ್ಲಿ ಕೋರ್ಟೇ ಬೇಡ ಎನ್ನಲಾಗುವುದಿಲ್ಲ. ಇನ್ನು ಹತ್ತು ವರ್ಷದ ಮೇಲೆ ಕೋರ್ಟು ಬರುವುದಾದರೂ ಸ್ವಲ್ಪ ಕಾಲ ಈ ಸಮಸ್ಯೆ ಬಂದೇ ಬರುತ್ತೆ.

ಇನ್ನು ಸರ್ಕಾರಕ್ಕೆ ಖರ್ಚಿನ ವಿಚಾರ. ಜನರ ಸೌಕರ್ಯಕ್ಕಾಗಿ ಸರ್ಕಾರ ಖರ್ಚು ಮಾಡಲೇಬೇಕಾಗುತ್ತದೆ. ಇದೂ ಕೂಡ ತಾತ್ಕಾಲಿಕವೇ. ಅವರುಗಳಿಗೆ ಅಷ್ಟು 'ಚಾರ್ಜ್' ಎನ್ನಿಸುವುದಾದರೆ ತೆರೆದ ಮನಸ್ಸಿನಿಂದ, ನ.ರಾ.ಪುರದ ಕೋರ್ಟನ್ನೇ ಇಲ್ಲಿಗೆ ವರ್ಗಾಯಿಸಲು ಹೇಳಬಹುದು. ಇದರಿಂದ ನ.ರಾ.ಪುರ ತಾ॥ನ ಜನರಿಗೇನೂ ಹೆಚ್ಚಿನ ತೊಂದರೆಯಾಗುವುದಿಲ್ಲ (ಅದರಿಂದ ಎಷ್ಟು ಹೆಚ್ಚು ಜನಕ್ಕೆ ಉಪಕಾರವಾಗುತ್ತೆಂಬುದನ್ನು ಪರಿಗಣಿಸಿದರೆ.)

ಆದ್ದರಿಂದ ಇನ್ನಾದರೂ ನ.ರಾ.ಪುರದ ವಕೀಲರು ಕೊಪ್ಪದ ಕೋರ್ಟಿಗೆ ಒಡ್ಡಿರುವ ತಮ್ಮ ಅಭ್ಯಂತರವನ್ನು ಹಿಂತೆಗೆದುಕೊಂಡು ಜನರಿಗೆ ಉಪಕಾರ ಮಾಡಲಿ ಎಂದು ನಮ್ಮ ನಮ್ರ ಸಲಹೆ.

–ಶಿವಶಂಕರ, ಲಕ್ಷ್ಮೀನಾರಾಯಣ
ಮತ್ತು ಇತರರು,
ಕಿಗ್ಗ, ಶೃಂಗೇರಿ ತಾ॥

ಅಬ್ಬಿಗದ್ದೆ ಪ್ರಾ. ಶಾಲೆಗೆ ವರಾಂಡ ಬೇಕು

ಮಾನ್ಯರೆ,

ಕೊಪ್ಪದ ಭಾರತ್ ಅಕ್ಕಿ ಗಿರಣಿ ಬಳಿಯಿರುವ ಅಬ್ಬಿಗದ್ದೆ ಪ್ರಾಥಮಿಕ ಶಾಲೆಗೆ ಹೊಸ ಕಟ್ಟಡವೇನೋ ಆಗಿದೆ. ಆದರೆ ಅದರ ಮುಂದುಗಡೆ ವರಾಂಡ ಇಲ್ಲವಾಗಿದೆ. ಮಳೆಗಾಲದಲ್ಲಿ ಶಾಲೆ ಬಾಗಿಲು ತೆರೆಯುವ ಮುಂಚೆ ಬಂದು ತಲುಪುವ ಮಕ್ಕಳು ನಿಲ್ಲಲು ಆಸ್ಪದವಿಲ್ಲವಾಗಿದೆ. ತಾ. ಅ.ಮಂ. ಅಧ್ಯಕ್ಷರು ವರಾಂಡ ಕಟ್ಟಿಸಿಕೊಡುವುದಾಗಿ ಭರವಸೆ ಕೊಟ್ಟಿದ್ದಾರಾದರೂ ಇನ್ನೂ ಕೆಲಸ ಆಗಿಲ್ಲ. ಮಳೆಗಾಲ ಹತ್ತಿರವಾಗಿರುವುದರಿಂದ ಸಂಬಂಧಪಟ್ಟವರು ಕೂಡಲೇ ಈ ಕೆಲಸ ಮಾಡಿಸಬೇಕೆಂದು ಮತ್ತೊಮ್ಮೆ ಜ್ಞಾಪಿಸುತ್ತಿದ್ದೇವೆ.

–ಸ್ಥಳೀಯ ನಿವಾಸಿಗಳು

ಅಗಲಿದ ಗೆಳೆಯನಿಗೆ ಶ್ರದ್ಧಾಂಜಲಿ

ಕಟ್ಟಿನಮನೆ: ಈಚೆಗೆ ತುಂಗ ಭದ್ರಾ ನಾಲೆಯಲ್ಲಿ ಮುಳುಗಿ ದುರಂತಕ್ಕೀಡಾದ ಇಲ್ಲಿನ ಗ್ರಾಮ ಲೆಕ್ಕಾಧಿಕಾರಿ ಕೆ. ಆರ್. ನಾರಾಯಣಮೂರ್ತಿಯವರ ಗೌರವಾರ್ಥ ಏ.೨೫ರಂದು ಇಲ್ಲಿನ ಗ್ರಾಮ ಪಂಚಾಯ್ತಿ ಮಾಸಿಕ ಸಭೆಯಲ್ಲಿ ಎರಡು ನಿಮಿಷ ಮೌನ ಆಚರಿಸಲಾಯಿತು. ಮೃತರ ಕುಟುಂಬದವರಿಗೂ, ಸಂಬಂಧಿತ ಇಲಾಖೆಗೂ ಸಂತಾಪ ಸೂಚಕ ಸಂದೇಶ ಕಳಿಸಲಾಯಿತು. ಸಭೆಯಲ್ಲಿ ಭಾಗವಹಿಸಿದ್ದ ಸರ್ಕಾರಿ ನೌಕರರು ಅಗಲಿದ ಗೆಳೆಯನಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಪಂಚಾಯ್ತಿ ಅಧ್ಯಕ್ಷ ಕೆ. ಎಂ. ಸೀತಾರಾಮಭಟ್ಟ ಸಭೆಯ ಅಧ್ಯಕ್ಷತೆ ವಹಿಸಿದ್ದರು. (ವರದಿ: ಹುಮನಾ)

ಲೋ. ಇಲಾಖೆ ಕಾರ್ಮಿಕರ ಬೇಡಿಕೆ ಈಡೇರದಿದ್ದರೆ ಚಳುವಳಿ ಬೆದರಿಕೆ

ಚಿಕ್ಕಮಗಳೂರು : ಇಂಜಿನಿಯರ್‌ಗಳ ಮನೆಗಳಲ್ಲಿ ರಸ್ತೆ ಗ್ಯಾಂಗ್ ಕೆಲಸಗಾರರನ್ನು ದುಡಿಸಕೂಡದು, ಸರ್ಕಾರ ನಿಗದಿ ಪಡಿಸಿದ ರಾಷ್ಟ್ರೀಯ ಹಾಗೂ ಇತರ ಹಬ್ಬದ ರಜೆಗಳನ್ನು ಒಡನೆಯೇ ನೀಡಬೇಕು ಹಾಗೂ ವಿನಾಕಾರಣ ಕೆಲಸದಿಂದ ತೆಗೆದುಹಾಕಿರುವ ನೌಕರರಿಗೆ ಪುನಃ ಕೆಲಸ–ಈ ಬೇಡಿಕೆಗಳನ್ನು ದಿನಾಂಕ ೨೦-೫-೮೩ ರ ಒಳಗೆ ಈಡೇರಿಸದಿದ್ದಲ್ಲಿ ಜಿಲ್ಲಾದ್ಯಂತ ನಡೆಯಲಿರುವ ಲೋಕೋಪಯೋಗಿ ನೌಕರರ ಚಳುವಳಿಯ ಪ್ರಥಮ ಕ್ರಮವಾಗಿ ೨೧-೫-೮೩ ರಂದು ಎಕ್ಸಿಕ್ಯುಟಿವ್ ಇಂಜಿನಿಯರ್ ಕಛೇರಿಯ ಮುಂದೆ ಸಾಮೂಹಿಕ ಉಪವಾಸ ಮುಷ್ಕರ ನಡೆಸಲು ೭-೫-೮೩ರಂದು ಸಭೆ ಸೇರಿದ್ದ ಜಿಲ್ಲಾ ಲೋಕೋಪಯೋಗಿ ಸಂಘದ ಕಾರ್ಯಕಾರಿ ಸಮಿತಿ ನಿರ್ಧರಿಸಿತು.

ಹಾಜರಿಯಲ್ಲಿ ಕಡಿತ, ಮನ ಬಂದಾಗ ನೀಡುವ ಸಂಬಳ, ಕಾರ್ಮಿಕರೊಂದಿಗೆ ಅಧಿಕಾರಿಗಳ ಅಸಭ್ಯ ವರ್ತನೆಗಳನ್ನು ಒಡನೆಯೇ ನಿಲ್ಲಿಸಬೇಕೆಂದು ಸಭೆ ಒತ್ತಾಯಿಸಿತು.

ಬಿಳಲುಕೊಪ್ಪದಲ್ಲಿ ಯುವಜನ ಮೇಳ, ಕಟ್ಟಡಗಳ ಉದ್ಘಾಟನೆ

ಅತ್ತಿಕೊಡಿಗೆ: ಇಲ್ಲಿನ ವಿದ್ಯಾಗಣಪತಿ ಯುವಕ ರೈತ ಸಂಘದ ಆಶ್ರಯದಲ್ಲಿ ಪಂಚಾಯ್ತಿ ಮಟ್ಟದ ಯುವಜನ ಮೇಳ ಏ. ೨೫ರಂದು ನಡೆಯಿತು. ಈ ಮಿನಿ ಯುವಜನ ಮೇಳವನ್ನು ಬಿ.ರಾಮಚಂದ್ರಯ್ಯ ಉದ್ಘಾಟಿಸಿದರು. ಗ್ರಾಮಾಧ್ಯಕ್ಷ ಬಿ. ಎಲ್. ವಾಸುದೇವಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಿ.ಕೆ. ದೇವಪ್ಪಯ್ಯ, ಕೆ. ವೆಂಕಟರಮಣ ಉಡುಪ, ಹೆನ್ರಿ ಪಿಂಟೋ ಆಗಮಿಸಿದ್ದರು.

ಈ ಯುವಮೇಳದಲ್ಲಿ ಕಲ್ಲುಗುಡ್ಡೆಯ ವಿವೇಕಾನಂದ ಯುವಕ ಸಂಘ ಅತಿ ಹೆಚ್ಚಿನ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆಯಿತು.

ಏ.೩೦ರಂದು ನಡೆದ ಸಮಾರಂಭದಲ್ಲಿ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆಯಲ್ಲಿ ನಿರ್ಮಿಸಲಾಗಿರುವ ಯುವಕ ರೈತ ಸಂಘದ ಕಟ್ಟಡವನ್ನು ಶಾಸಕ ಹೆಚ್.ಜಿ.ಗೋವಿಂದಗೌಡರು ಉದ್ಘಾಟಿಸಿದರು. ವಿಭಾಗ ಅರಣ್ಯಾಧಿಕಾರಿ ಸುಂದರ್ ನಾಯಕ್ ಪ್ರಗತಿ ಮಹಿಳಾ ಸಮಾಜದ ಕಟ್ಟಡವನ್ನು, ಕ್ಷೇತ್ರಾಭಿವೃದ್ಧಿ ಅಧಿಕಾರಿ ಬಾಲಣ್ಣಗೌಡರು ಮಾಧ್ಯಮಿಕ ಶಾಲಾ ಕೊಠಡಿಯನ್ನು ಉದ್ಘಾಟಿಸಿದರು. ಯುವ ಮೇಳದಲ್ಲಿ ವಿಜೇತರಿಗೆ ಶ್ರೀಮತಿ **ಜ್ಯೋತಿ ಸುಂದರನಾಯಕ್** ಹಾಗೂ ವಾರ್ಷಿಕ ಕ್ರೀಡೆಯಲ್ಲಿ ವಿಜೇತರಿಗೆ ಶ್ರೀಮತಿ ಚಂದ್ರಾ ಬಾಲಣ್ಣಗೌಡ ಬಹುಮಾನ ವಿತರಣೆ ಮಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ತಾಲ್ಲೂಕು ಮಂಡಳಿ ಅಧ್ಯಕ್ಷ ಬಿ.ಜಿ. ಚಿದಂಬರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತಹಸೀಲ್ದಾರ್ ಹೆಚ್. ಎಂ. ನಾಗಪ್ಪ ಮತ್ತು ಸಹಾಯಕ ಕೃಷಿ ನಿರ್ದೇಶಕ ಎಂ. ಎಸ್. ಸುಬ್ಬೇಗೌಡ ಆಗಮಿಸಿದ್ದರು. ಬಿ. ಎಲ್. ವಾಸುದೇವಮೂರ್ತಿ, ಸ್ವಾಗತಿಸಿ, ಯುವಕ ಸಂಘದ ಅಧ್ಯಕ್ಷರು ವಂದಿಸಿದರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ